ನಾನ್ ವೆಜ್ ಬೇಡ...'

ಪಾದರಿ ಬಂಗಲೆಯ ಕಬ್ಬಿಣದ ಬಾಗಿಲು ಸದ್ದು ಮಾಡಿತು.

ಬಾಲ್ತಿದಾರ ತನ್ನ ಹೆಂಡತಿ ಮಗಳ ಜೊತೆ ಬಂದು ಪಾದರಿಗೆ ಕೈಮುಗಿದ. ತಾನು ಹೊತ್ತು ತಂದ ಪಪ್ಪಾಯಿ ಹಣ್ಣನ್ನ ಪಾದರಿಗೆ ಒಪ್ಪಿಸಿದ. ನಮ್ಮ ಮನೆಯಲ್ಲಿ ಬೆಳೆದದ್ದು ಎಂದು ಮಾತು ಸೇರಿಸಿದ. ಕ್ಲಮೆಂಟೊ ಬಾಲ್ತಿದಾರನ ಹೆಂಡತಿ ಮಗಳ ಜತೆ ಮಾತನಾಡಿದರು.

'ಏನು ನಿನ್ನ ಹೆಸರು?'

'ತೆರೇಜಾ'

'ಗುಡ್, ಮುಂದೆ ಮದರ್ ತೆರೇಜಾ ಆಗ ಬೇಕು' ಎಂದು ನಕ್ಕರು ಕ್ಲಮೆಂಟಾ.

'ಈವತ್ತೇ ನಿಮ್ಮನ್ನ ನೋಡಬೇಕು ಅಂತ ಹಟ ಹಿಡಿದಳು, ಅದಕ್ಕೆ ಕರೆದುಕೊಂಡು ಬಂದೆ...'

'ಹೌದಾ? ನಾನು ಮತ್ತೂ ಇರತೀನಿ ಈ ಊರಲ್ಲಿ... ಇರಬೇಕೋ ಬೇಡ್ವೋ ಹೇಳು? ಕ್ಲಮೆಂಟಾ ನಕ್ಕರು.

'ನೀವು ಇರಬೇಕು ಫಾದರ್, ತುಂಬಾ ದಿನ ಇದ್ದು ನಮಗೆಲ್ಲ ಒಳ್ಳೇದನ್ನ ಬೋಧಿಸಬೇಕು... ನಾನು ದೇವರಲ್ಲಿ ಇದನ್ನೇ ಬೇಡಿಕೊಳತೇನೆ...' ಕ್ಲಮೆಂಟಾ ತೆರೇಜಾಳ ಕೆನ್ನೆ ಸವರಿ ನಕ್ಕರು.

ಮತ್ತೂ ಒಂದೆರಡು ನಿಮಿಷ ಅಲ್ಲಿ ನಿಂತಿದ್ದು ಇವರು ಹೊರಟರು. ಮೊದಲು ತೆರೇಜಾ, ನಂತರ ಅವಳ ತಾಯಿ, ಕೊನೆಯದಾಗಿ ಬಾಲ್ತಿದಾರ ಕ್ಲಮೆಂಟಾಗೆ ಕೈ ಮುಗಿದರು.

***

ಇಗರ್ಜಿಯ ಹತ್ತಿರವಿದ್ದ ಒಂದೆರಡು ಮನೆಗಳಿಂದ ರಾತ್ರಿಯ ತೇರ್ಸ ಕೇಳಿಸಿತು. ಒಂದೊಂದು ಕುಟುಂಬದವರು ಒಟ್ಟಿಗೆ ಪರಲೋಕ, ನಮೋರಾಣಿ ಮಂತ್ರ ಹೇಳುವುದು, ಕೊನೆಯಲ್ಲಿ

'ಜೂಜೆ ಬಾಪ ಪಾವತೂ ಅಮ್ಕಾಂ' (ತಂದೆ ಜೋಸೇಫರೇ ನಮ್ಮನ್ನ ಕಾಪಾಡಿ) ಎಂಬ ಸಮೂಹ ಗೀತೆ. ನಂತರ ಮನೆಯ ಮಕ್ಕಳು ಹಿರಿಯರಲ್ಲಿ ಕೇಳುವ ಆಶೀರ್ವಾದ.

'ಬಾಬಾ ಬೆಸ್ಸಾಂವ್ ದೀ'

'ಮಾಯ್ ಬೆಸ್ಸಾಂವ್ ದೀ'

'ದಾದಾ..ಬೆಸ್ಸಾಂವ ದೀ...'

'ಬಾಯೇ...ಬೆಸ್ಸಾಂವ್ ದೀ...'

'ಹುನ್ನಿ... ಬೆಸ್ಸಾಂವ್ ದೀ...'

ದೇವರ ಆಶೀರ್ವಾದ ದೇವರ ಆಶೀರ್ವಾದ

ಮನೆಯ ಮೂಲೆ ಮೂಲೆಯಿಂದ ಕೇಳಿ ಬರುತ್ತಿರುವ ಮಾರುತ್ತರ. ಆನಂತರದ ಊಟದ ಗಡಿಬಿಡಿ ಗದ್ದಲ. ಇಗರ್ಜಿ ಸುತ್ತಲಿನ ಮನೆಗಳ ಮುಂದಿನ ಹಿಂದಿನ ಒಳಗಿನ ದೀಪಗಳು ಆರತೊಡಗಿದವು. ಮನಸ್ಸಿಗೆ ಹಿತಕರವಾದ ಮೌನ, ಶಾಂತತೆ, ಪಾದರಿ ಕ್ಲಮೆಂಟಾ ಮಂಚದ ಮೇಲೆ ಕುಳಿತು 'ತಂದೆಯಾ ಮಗನ ಸ್ಪಿರಿತು ಸಾಂತುವಿನ ಹೆಸರಿನಲ್ಲಿ ಒಳ್ಳೆಯ ಹಗಲನ್ನ ನೀಡಿದ ತಂದೆಯೇ... ಒಳ್ಳೆಯ ರಾತ್ರಿಯನ್ನೂ ನೀಡು...ನಮ್ಮೆಲ್ಲರನ್ನ ರಕ್ಷಿಸು' ಎಂದು ಕೇಳಿಕೊಂಡು ಹಾಸಿಗೆಯ ಮೇಲೆ ಉರುಳಿ ಕೊಂಡರು.

ರೈಲಿರಬೇಕು ಸದ್ದು ಮಾಡಿಕೊಂಡು ಊರನ್ನ



ಪ್ರವೇಶಿಸಿತು. ಹಿಂದೆಯೇ ಜನರ ಗದ್ದಲ, ವಾಹನಗಳ ಸದ್ದು, ಕ್ರಮೇಣ ಎಲ್ಲ ಮಾಯವಾಗಿ ಮತ್ತೆ ಮೌನ, ಶಾಂತಿ.

ಕ್ಲಮೆಂಟಾ ಆಕಳಿಸಿದರು. ಅಂದು ಮಧ್ಯಾಹ್ನದ ನಿದ್ದೆ ಆಗಿರಲಿಲ್ಲ. ನಾಲ್ಕು ಗಂಟೆ ಬಸ್ಸಿನಲ್ಲಿಯೇ ಕಳೆದು ಹೋಗಿತ್ತು. ಕಣ್ಣಿಗೆ ತುಸು ಜೊಂಪು ಬಂದಿತ್ತಾದರೂ, ನಿದ್ದೆ ಬಂದಿರಲಿಲ್ಲ. ಹಳೆಯ ಊರನ್ನ ಬಿಟ್ಟು ಹೋಗುತ್ತಿದ್ದೇನೆ ಎಂಬ ವ್ಯಥೆ ಹೊಸ ಊರಿಗೆ ಹೋಗುತ್ತಿದ್ದೇನೆ ಎಂಬ ಆತಂಕ. ಈ ಗೊಂದಲದಲ್ಲಿಯೇ ಹಳೆಯ ಊರು ಹಿಂದಾಗಿ ಹೊಸ ಊರು ಬಂದಿತ್ತು.

ಕಳೆದ ಎಂಟು ವರ್ಷಗಳಿಂದ ಅವರು ಬಾಳೇಬೈಲಿನಲ್ಲಿ ಇದ್ದರು. ಒಳ್ಳೆಯ ಪಾದರಿ ಅನಿಸಿಕೊಂಡೇ ಇದ್ದರು. ಊರ ಜನ ಅವರನ್ನು ಅತಿಯಾಗಿ ಹಚ್ಚಿ ಕೊಂಡಿದ್ದರು. ಇವರ ವರ್ಗದ ಸುದ್ದಿ ಬಂದಾಗ ಕೆಲವರು ಬಿಷಪ್ ಹಹತ್ತಿರ ಹೋಗಿ ಈ ವರ್ಗಾವಣೆಯನ್ನ ರದ್ದು ಮಾಡುವ ವಿಷಯ ಪ್ರಸ್ತಾಪಿಸಿದ್ದರು. ಕ್ಲಮೆಂಟಾ ತಾವೇ ಮುಂದಾಗಿ ಬೇಡ ಎಂದಿದ್ದರು. ಅವರನ್ನ ಬೀಳ್ಕೊಳ್ಳಲು ಅವರ ಜೊತೆ ಒಂದು ತಂಡವೇ ಬಾಳೇ ಬೈಲಿಗೆ ಹೊರಟಿತ್ತು, ಅವರಿಗೂ ಬೇಡ ಎಂದು ಹೇಳಿದ್ದರು ಅವರು.

'ಇಂದು ಈ ಊರು ನಾಳೆ ಮತ್ತೊಂದು... ನೀವೆಲ್ಲ ಇಷ್ಟು ದಿನ ನನ್ನ ಜೊತೆ ಚೆನ್ನಾಗಿ ಇದ್ದಿರಲ್ಲ ಅದು ನನಗೆ ಸಾಕು..'

ಆದರೂ ಬಸ್ಸು ಹೊರಟಾಗ ಅವರ ಕಣ್ಣಾಲಿಗಳು ತುಂಬಿ ಬಂದಿದ್ದವು. ಈವರೆಗೆ ಬಾಳೇ ಬೈಲು. ನಾಳೆಯಿಂದ ಹೊಸ ಊರು ನೋಡೋಣ, ಅವರು ಆಕಳಿಸಿದರು.

ಪಾದರಿ ಕ್ಲಮೆಂಟಾ ನಿದ್ದೆ ಬರುತ್ತಿದೆ ಅನ್ನಿಸಿದ್ದರಿಂದ ಹಾಗೆಯೇ ಹಾಸಿಗೆಯ ಮೇಲೆ ಮೈಚೆಲ್ಲಿದರು. ತುಸು ಬೇಗನೆ ನಿದ್ದೆ ಬಂದು ಅವರನ್ನ ಆವರಿಸಿ ಕೊಂಡಿತು.

***

ಪಾದರಿ ಕ್ಲಮೆಂಟಾ ಅವರಿಗೆ ತಟ್ಟನೆ ಎಚ್ಚರವಾಯಿತು. ಹಿಡಿದು ಅಲುಗಾಡಿಸಿದ ಹಾಗೆ ಎಚ್ಚರ, ಹತ್ತಿಪ್ಪತ್ತು ಜನ ಒಟ್ಟಿಗೇನೆ ಬೊಬ್ಬೆ ಹೊಡೆದ ಹಾಗೆ. ಏನೋ ಸಿಡಿದಹಾಗೆ. ಉರಿದು ಬೆಂದ ಹಾಗೆ. ಚಟಚಟನೆ ಏನೋ ಬೆಂಕಿ ತಗುಲಿ ಉರಿದು ಹೋದ ಹಾಗೆ. ಜನರ ಗದ್ದಲ. ಕಿರುಚಾಟ. ಬೊಬ್ಬೆ.

ಬಾಗಿಲು ತೆರೆದು ಕೊಂಡು ಕ್ಲಮೆಂಟಾ ಬಂಗಲೆಯಿಂದ ಹೊರ ಬಂದರು. ಇಗರ್ಜಿಗೆ ಅನತಿ ದೂರದಲ್ಲಿಯ ಒಂದು ಮನೆ ಬೆಂಕಿ ಆವರಿಸಿಕೊಂಡು ಉರಿಯುತ್ತಿದೆ. ಬೆಂಕಿ ಆರಿಸುವ, ನೀರನ್ನ ಚೆಲ್ಲುವ, ಅಂಗಳದಲ್ಲಿಯ ಬಾಳೆ ಗಿಡಗಳನ್ನ ಕತ್ತರಿಸಿ ಬೆಂಕಿಗೆ ಹಾಕುವ ಯತ್ನ ನಡೆದಿದೆ.

ಪಾದರಿ ಕ್ಲಮೆಂಟಾ ಗೇಟು ತೆರೆದುಕೊಂಡು ಹೊರಗೆ ಹಾರಿದರು. ಒಂದು ಮನೆಗೆ ಹೊತ್ತಿಕೊಂಡ ಬೆಂಕಿ ಉಳಿದ ಮನೆ ಗೋಡೆಗಳ ಮೇಲೆ ಕುಣಿದಾಡುತ್ತಲಿತ್ತು. ಕಪ್ಪು ಹೊಗೆ ಅಲ್ಲೆಲ್ಲ ಆವರಿಸಿ ಕೊಂಡು ಏನೂ ಕಾಣದಂತಹಾ ಪರಿಸ್ಥಿತಿ ಅಲ್ಲಿ ಉದ್ಭವಿಸಿತ್ತು. ನೋಡುತ್ತಿರಲು ಬೆಂಕಿ ಪ್ರತಿ ಮನೆಗೂ ಹಬ್ಬಿ ಕೊಂಡು ಎಲ್ಲ ಮನೆಗಳೂ ಹೊತ್ತಿ ಕೊಂಡು ಉರಿಯ ತೊಡಗಿದವು. ರಾತ್ರಿಯ ಪ್ರಾರ್ಥನೆ ಮಾಡಲೆಂದು ಯಾರೋ ದೇವರ ಮುಂದೆ ಹೊತ್ತಿಸಿದ ಮೇಣದ ಬತ್ತಿಗಳನ್ನ ಆರಿಸಿರಲಿಲ್ಲ. ಅವು ಉರಿದು ಪೀಠದ ಕೆಳಗಿನ ಹಲಗೆಗೆ, ಹಾಸಿದ ಬಟ್ಟೆಗೆ, ಗೋಡೆಯ ಮೇಲೆ ಹಚ್ಚಿದ ದೇವರ ಪಟಗಳಿಗೆ ಹಬ್ಬಿ ಇಡೀ ಮನೆಯನ್ನ ಬಲಿ ತೆಗೆದುಕೊಂಡಿತ್ತು. ಸಾಲದೆಂದು ಮನೆಯಿಂದ ಮನೆಗೆ ತನ್ನ ಕೆನ್ನಾಲಿಗೆ ಚಾಚಿತ್ತು. ಊರ ಜನರೇ ಧಾವಿಸಿ ಬಂದರು. ಇಗರ್ಜಿ ಬಾವಿಯಿಂದ ನೀರು ಸೇದಿ ಬೆಂಕಿ ಆರಿಸುವ ಯತ್ನ ಮಾಡಿದರು. ಅದೇ ಆರಂಭವಾದ ಗಾಳಿ ತಾನೂ ಇದ್ದೇನೆ ಎಂಬುದನ್ನ ತೋರಿಸುವಂತೆ ಬೀಸ ತೊಡಗಿತು. ಜನರ ಕೂಗಾಟ ಕಿರುಚಾಟದ ನಡುವೆ ಬೆಂಕಿ ಮನೆಯಿಂದ ಮನೆಗೆ ಹಬ್ಬತೊಡಗಿತು.

ಟೈಲರ ಲಾದ್ರು ಮನೆ, ಕೇವಲ ಹುಲ್ಲು ಹೊದಿಸಿದ ಕಲ್ಲು ಕೆತ್ತುವ ಕೈತಾನನ ಮನೆ, ಮನೆ ಕೆಲಸದ ಅಪ್ಪಿಯ ಮನೆ, ಬಾಣಂತಿಯರಿಗೆ ನೀರು ಹಾಕುವ ಮೇರಿ ಬಾಯಿಯ ಮನೆ, ಕಾರ್ಪೆಂಟರ್ ಗುಸ್ತೀನನ ಮನೆ, ಹಂದಿ ರುಜಾರಿ ಮನೆ, ಅಡಕೆ ಗರಿ ಹೊದಿಸಿದ ಮರಿಯಾಣನ ಮನೆ. ಇನ್ನೂ ಕೆಲ ಬಡವರ ಮನೆಗಳು ಉರಿದು ಹೋದವು. ಪಾದರಿ ಕ್ಲಮೆಂಟಾ ಇಗರ್ಜಿ ಮುಂದಿನ ಪೋರ್ಟಿಕೋದಲ್ಲಿ ನಿಂತವರು ಕಣ್ಣುಗಳನ್ನ ವರೆಸಿಕೊಂಡರು.

'ಎಲ್ಲ ಮನೆಗಳೂ ಸುಟ್ಟು ಹೋದವು ಫಾದರ್, ಇದೀಗ ಇಗರ್ಜಿ ಮಗ್ಗುಲಿನ ಅಷ್ಟೂ ಮನೆಗಳು ಬೂದಿಯಾದವು...'

ಯಾರೋ ನಡುಗುವ ದನಿಯಲ್ಲಿ ಕೂಗಿಕೊಂಡರು.

ಪಾದರಿ ಕ್ಲಮೆಂಟಾ ಆ ವ್ಯಕ್ತಿಯನ್ನ ತಬ್ಬಿ ಹಿಡಿದುಕೊಂಡರು.

'ಯಾರೂ ಯೋಚಿಸಬೇಡಿ, ಇಲ್ಲಿ ಬಡವರಿಗಾಗಿ ಮನೆಗಳನ್ನ ಕಟ್ಟಲಿಕ್ಕೂ ಸಾಧ್ಯ ಇದೆ...'

ಅಲ್ಲಿ ನಿಂತವರೆಲ್ಲರ ಎದೆಯಲ್ಲಿ ಈ ಮಾತು ಧೈರ್ಯವನ್ನ ತಂದಿತು. ಜನ ಬೂದಿ ರಾಶಿಯಿಂದ ಕಪ್ಪು ಹೊಗೆ ನಿಧಾನವಾಗಿ ಮೇಲೆ ಏಳುವುದನ್ನ ನೋಡುತ್ತ ನಿಂತರು.

(ತೇರ್ಸ = ಜಪಸರ ಪ್ರಾರ್ಥನೆ. ಪಾತ್ರೋನ್ = ಒಂದು ಇಗರ್ಜಿಯ ಪ್ರಧಾನ ಸಂತ. ಬೆಸಾಂವಂ= ಆಶೀರ್ವಾದ)

ಪ್ರತಿಕ್ರಿಯಿಸಿ: feedback@sudha.co.in